


International Journal of Kannada Research
www.kannadajournal.com

**ISSN: 2454–5813**
IJKR 2019; 5(4): 09-11
© 2019 IJKR
www.kannadajournal.com
Received: 10-08-2019
Accepted: 13-09-2019

**ಡಾ. ಎಸ್. ಬಿ. ರಾಠೋಡ**
ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಕನ್ನಡ ವಿಭಾಗ., ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ

**Corresponding Author:**
**ಡಾ. ಎಸ್. ಬಿ. ರಾಠೋಡ**
ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಕನ್ನಡ ವಿಭಾಗ., ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ

# ಕನ್ನಡ ಭಾಷೆ ಮತ್ತು ಜನಪದ

**ಡಾ. ಎಸ್. ಬಿ. ರಾಠೋಡ**

**ಪೀಠಿಕೆ**

ಇಡೀ ಮಾನವಪ್ರಪಂಚದ ಶೋಧನೆಗಳು, ಮನುಷ್ಯನ ಭಾಷೆಗೆ ಸಮವಾಗಲಾರದು ಎಂಬ ಅಭಿಪ್ರಾಯ ಡಾರ್ವಿನರವರದು. ಮಾನವನಿಗೆ ದೇವರು ನೀಡಿರುವ ಅಪೂರ್ವ ಮತ್ತು ಅಮೂಲ್ಯ ವರಗಳಲ್ಲಿ ಭಾಷೆ ಅತ್ಯಂತ ಪ್ರಮುಖವಾದುದು. ಭಾಷೆ ಇಲ್ಲದೇ ಹೋಗಿದ್ದರೆ, ಮನುಕುಲದ ಬದುಕೇ ಕತ್ತಲಾಗುತ್ತಿತ್ತು. ಭಾಷೆಯಿಂದ ಮಾನವ ಸಂಸ್ಕೃತಿ ಉಳಿಯುತ್ತಿದೆ. ತಲೆಮಾರಿನಿಂದ ತಲೆಮಾರಿನವರೆಗೆ ಜೀವಂತವಾಗಿ ಪ್ರಸಾರವಾಗುತ್ತಿರುವುದು ಭಾಷೆ. ಇದು ಮನುಷ್ಯನ ಅಮೋಘ ಅದ್ಬುತ್ ವರ. ಮಗುವಿನ ತೊದಲು ಮಾತಿನಿಂದ, ಮಹನೀಯರ ಅಮರ ವಾಕ್ಯದವರೆಗೆ ಹಲವಾರು ಮಜಲುಗಳಲ್ಲಿ ಹರಡಿಕೊಂಡಿದೆ. ಅಂದಿನಿಂದ ಇಂದಿನವರೆಗೆ ಮನುಷ್ಯ ಇದರ ಸಹಾಯದಿಂದಲೇ ನಾಗರೀಕನಾಗಿ, ಸಾಹಿತಿಯಾಗಿ, ವೇದಾಂತಿಯಾಗಿ ಸಮಾಜದಲ್ಲಿ ಸರ್ವಶ್ರೇಷ್ಠ ಸದಸ್ಯನ್ನಾಗಿ ಬಾಳ್ವೆಯನ್ನು ಮಾಡುತ್ತಿರುವುದು ವಿಶೇಷ. ಮಾನವನು ಭಾವನಾ ಜೀವಿಯಾಗಿರುವದರಿಂದ ಅವನ ಹೃದಯ ಮನಸ್ಸುಗಳಲ್ಲಿ ಹಲವಾರು ಭಾವ–ತರಂಗಗಳು ಏಳುತಿರುತ್ತವೆ. ಅವು ಕೇವಲ ಭಾವಗಳಾಗಿಯೇ ಸವೆದು, ಸತ್ತು ಹೋದರೆ ಕೆಲವೇ ಕೆಲವು ಜನ ಪ್ರತಿಭಾವಂತರಲ್ಲಿ ಈ ಭಾವನೆಗಳು ಸಾಕಾರರೂಪತಾಳಿ ನಿಲ್ಲುತ್ತವೆ. ಭಾವನೆಯಲ್ಲಿ ಭಾಷೆಯು ಪ್ರಕಟಗೊಂಡರೆ ಸಾಹಿತ್ಯವಾಗುತ್ತದೆ. ಹೀಗಾಗಿ ಸಾಹಿತ್ಯವಾಹಿನಿಗೂ ಭಾಷೆ, ಒಂದು ಅನಿವಾರ್ಯ ಮಾಧ್ಯಮವೆಂದೇ ಹೇಳಲಾಗುತ್ತದೆ.

**ಶಿಷ್ಠಮೊದಲೋ ? ಜನಪದ ಮೊದಲೋ ?**

ಯಾವುದೇ ಭಾಷೆಯ ಸಾಹಿತ್ಯ ಕೇವಲ ಬಾಯಿಯಲ್ಲಿಯೇ ಮೊದಮೊದಲು ಉಳಿಯುತ್ತಿತ್ತು. ಜನರು ಆಡುವ ಭಾಷೆಯಲ್ಲಿ ಉಳಿದುಕೊಂಡು ಬೆಳೆದುಕೊಂಡು ಬಂದಿರುವ, ಬರುತ್ತಿರುವ ಸಾಹಿತ್ಯವೇ ಜನಪದ ಸಾಹಿತ್ಯ. ಶಿಷ್ಠಸಾಹಿತ್ಯವನ್ನು ಹೋಲಿಕೆ ಮಾಡಿದರೆ, ಜನಪದ ಸಾಹಿತ್ಯ ಮಾನವನ ಸೃಷ್ಟಿ ಎಂದಾಯಿತೋ ಅಂದೇ ಜನಪದ ಸಾಹಿತ್ಯದ ಸೃಷ್ಟಿ ಆಯಿತೆಂದು ಹೇಳಲಾಗುತ್ತದೆ. ಭಾಷೆಯಲ್ಲಿ ಅದರ ಲಿಪಿಗಳ ಆವಿಷ್ಕಾರವಾಯಿತು. ಲಿಪಿಗಳು ಸಂಸ್ಕರಣಗೊಂಡು ಬೆಳೆದು ನಿಂತಾಗ, ಬರವಣಿಗೆ ಆರಂಬವಾಯಿತು ಬರವಣಿಗೆ ಆರಂಭವಾದಂತೆ ಹೀಗೆ ಬರವಣಿಗೆಯಲ್ಲಿ ಭಾವನೆಗಳು ಪ್ರಕಟಗೊಂಡಾಗಲೇ ಶಿಷ್ಟ ಸಾಹಿತ್ಯ ಉಗಮಗೊಂಡಿತು. ಒಂದು ಭಾಷೆ ಸಾಹಿತ್ಯ ಮತ್ತು ನಾಗರಿಕತೆ ನಿಶ್ಚಯವಾಗಿ ಎಂದು ಹುಟ್ಟಿದವು ಎಂಬುವದನ್ನು ಕರಾರುವಕ್ಕಾಗಿ ಹೇಳುವುದು ಅಸಾದ್ಯ. ಮನುಷ್ಯ ಭಾಷೆಯನ್ನು ಕಂಡುಕೊಂಡು ಭಾಷೆಯೊಂದಿಗೆ ಒಡನಾಟ ನಡೆಸುತ್ತಾ ಬರವಣಿಗೆ ಹಾಗೂ ಸಾಹಿತ್ಯವನ್ನು ಸೃಷ್ಟಿಸಿಕೊಂಡಿದ್ದಾನೆ. ಒಂದು ಭಾಷೆ, ಸಂಸ್ಕ ತಿಗಳು ವಿಕಾಸವಾಗುತ್ತಾ ಕಾಲದ ಸಂದರ್ಭಗಳಿಗನುಗುಣವಾಗಿ ಹೊಸ ಆಯಾಮ ಪಡೆಯುತ್ತವೆ. ಒಂದು ಭಾಷೆಯಲ್ಲಿ ಸಾಮಾಜಿಕ ವ್ಯವಹಾರ, ಶಿಕ್ಷಣ, ಸಂಸ್ಕ ತಿ ನಾಗರಿಕತೆಗಳು ಬೆಳೆಯುತ್ತಿರುವಂತೆ ಜೊತೆಯಲ್ಲಿ ಸಾಹಿತ್ಯವು ಸೃಷ್ಟಿಯಾಗುತ್ತದೆ. ಸಾಮಾನ್ಯ ಅರ್ಥದಲ್ಲಿ ಜ್ಞಾನರಾಶಿ ಹಾಗೂ ಜೀವನಾನುಭವಗಳನ್ನೊಳಗೊಂಡ ಗ್ರಂಥರಾಶಿಯನ್ನು ಸಾಹಿತ್ಯ ಎನ್ನಬಹುದು. ಕವಿಗಳು, ದಾರ್ಶನಿಕರು, ವಿಜ್ಞಾನಿಗಳು, ಸಮಾಜ ಚಿಂತಕರು ತಾವು ಕಂಡುಕೊಂಡ ಸತ್ಯಗಳನ್ನು, ತಮ್ಮ ಕನಸು, ಕಲ್ಪನೆ ಮತ್ತು ಆಲೋಚನೆಗಳನ್ನು ಸಂವೇದನಾ ಶೀಲ ಮನಸ್ಥಿತಿಯಲ್ಲಿ ಬರೆದಿಟ್ಟಿರುವ ಜ್ಞಾನ ಸಂಪತ್ತೇ ಸಾಹಿತ್ಯ. ಸಾಹಿತ್ಯವು ಗ್ರಂಥರೂಪಕ್ಕಷ್ಟೇ ಸೀಮಿತವಾಗಿರದೆ ಜನಪದ ಸಂಗೀತ, ಶಿಲ್ಪಕಲೆ, ಸಂಪ್ರದಾಯ ಮುಂತಾಗಿ ವಿಭಿನ್ನ ರೂಪಗಳಲ್ಲಿ ಬೆಳೆಯುತ್ತಿರುವುದು ಗಮನಾರ್ಹ.

ಪ್ರಪಂಚದ ಭಾಷೆ, ಸಂಸ್ಕೃತಿ, ಶಿಕ್ಷಣ ಬೆಳೆದು ವಿಕಾಸವಾದಂತೆ ಸಾಹಿತ್ಯವು ಹುಟ್ಟಿಬೆಳೆದಿರಬೇಕು. ಸಾಹಿತ್ಯವು ವಿವಿಧ ಕ್ಷೇತ್ರದಲ್ಲಿ ಕೃಷಿವಾದಂತೆ ಹೆಚ್ಚ ಹೆಚ್ಚೂ ಕವಿ, ಸಾಹಿತಿಗಳು, ಸಹೃದಯರು, ವಿಮರ್ಶಕರು, ಸಾಹಿತ್ಯ ಪೋಷಕರು ಹುಟ್ಟಿ ಕೊಂಡಿರುವುದು ನಿಜ. ಒಟ್ಟಾರೆ ನಮ್ಮ ಜನಜೀವನ ವಿಕಾಸವಾದಂತೆ ಜನಪದ ಮೌಖಿಕ ಸಾಹಿತ್ಯವನ್ನು ಹಿಂದಕ್ಕೆ ಹಾಕಿ ಲಿಖಿತ ರೂಪದಲ್ಲಿ ಶಿಷ್ಟಸಾಹಿತ್ಯ ರಚಿತಗೊಂಡಿರುವುದು ಖಚಿತ. ಎಲ್ಲ ಸಾಹಿತ್ಯಕ್ಕೆ ಜನಪದವೇ ಮೂಲಬೇರು ಎಂದು ಹೇಳುವದರಲ್ಲಿ ಯಾವ ತಪ್ಪು ಕಾಣಲಾರೆವು. ಯಾಕೆಂದರೆ ಮನುಷ್ಯನ ಹುಟ್ಟಿನೊಂದಿಗೆ ಈ ಜನಪದ ಸಾಹಿತ್ಯ

ಹುಟ್ಟಿಕೊಂಡಿರಬೇಕು ಜನಪದ ಅಂದರೆ ಜನರು ತಮ್ಮ ವಿನೋದದ ಗೋಸ್ಕರ ಹಾಡಿನ ರೂಪದಲ್ಲಿ ಹೊರಹಾಕಿರಬೇಕು. ತದನಂತರ ಲಿಪಿಕಂಡರು, ಜನಪದ ಸಾಹಿತ್ಯ ಪಾಮರರ ಸಾಹಿತ್ಯವಾಯಿತು. ಶಿಷ್ಟಸಾಹಿತ್ಯ ಪಂಡಿತರವರ್ಗಕ್ಕೆ ಸೇರ್ಪಡೆಯಾಯಿತು. ಆದರೆ ಜನಪದ ಸಾಹಿತ್ಯಕ್ಕೆ ವಿಶ್ವವಿಶಾಲತೆ ಇದೆ. ಜನಸಾಮಾನ್ಯರ ನೋವು–ನಲಿವು ಈ ಸಾಹಿತ್ಯದಲ್ಲಿ ಅಡಗಿಕೊಂಡಿದೆ.

**ಪ್ರಾಚೀನ ಭಾಷೆಗಳು :** ಅತ್ಯಂತಹ ಪ್ರಾಚೀನವಾದ ಭಾಷೆಗಳಲ್ಲಿ ಸಂಸ್ಕೃತ ಭಾಷೆಯ ಹಿರಿತನವಿದೆ. ತದನಂತರ ಬರುವುದು ತಮಿಳು ಭಾಷೆ, ಈ ಭಾಷೆಯು ಹೆಚ್ಚು ವಿಪುಲವಾದ ಸಾಹಿತ್ಯವುಳ್ಳದ್ದು ಎಂಬುವದು ಪಂಡಿತರ ಅಭಿಮತ. ಇವರ ಪ್ರಕಾರ 'ತಮಿಳು'ಪದವು ಸವಿ ಅನ್ನುವ ಪದದ ಅರ್ಥವನ್ನು ಸವಿ ಮತ್ತು ಕಾರುಣ್ಯ ಎಂದು ಹೇಳುತ್ತಾರೆ. ಸರ್ವಜ್ಞ ಹೇಳುವ ಪ್ರಕಾರ 'ತಿಗುಳ ಜನಗೆಣೆಯಿಂದ ತಿಗುಣಿಯಾ ಕಡಿ ಲೇಸು' ಎನ್ನುವಲ್ಲಿಯ 'ತಿಗುಳ' ಅಂದರೂ ಈ ತಮಿಳರೇ. ತಿಗುಳ ಎಂದರೆ 'ಒರಟ' ಹುಂಬ ಎಂಬರ್ಥ.

ಚರಿತೆಯ ಪ್ರಕಾರ ತಮಿಳು ಭಾಷೆಯ ಸಾಹಿತ್ಯವೆಲ್ಲ ಅಗಸ್ತ್ಯಋಷಿಯಿಂದಲೇ ರಚಿತವಾಯಿತು. ಶಂಭುರಹಸ್ಯ ಎನ್ನುವ ಸಂಸ್ಕೃತ ಗ್ರಂಥದ ಮೇರೆಗೆ ಶಿವನ ಡಮರುವಿನ ಬಲಭಾಗದಿಂದ ಸಂಸ್ಕೃತವೂ, ಎಡಭಾಗದಿಂದ ತಮಿಳು ಭಾಷೆಯೂ ಹುಟ್ಟಿಕೊಂಡವು. ಸ್ವತ ಶಿವನೇ ಸಂಸ್ಕೃತವನ್ನು ಪಾಣಿನಿಗೂ, ತಮಿಳನ್ನೂ ಅಗಸ್ತ್ಯಋಷಿಗೂ ದಯಪಾಲಿಸಿದನು. ಅಂತಲೇ ಆಕರ್ಷಕವಾದ ತಮಿಳು ಭಾಷೆ ಎಂಬ ವಿಚಾರವನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಒಬ್ಬನೇ ವ್ಯಕ್ತಿ ಎಷ್ಟೇ ಮೇಧಾವಿಯಿರಲಿ, ಇಲ್ಲವೆ ಸಾಹಸಿಯಿರಲಿ ಒಂದು ಭಾಷೆಯನ್ನು ನಿರ್ಮಿಸಲಾರನು. ಭಾಷಾದೃಷ್ಟಿಯಿಂದ ಅಧ್ಯಯನಮಾಡುವಾಗ ಭಾಷೆ ಸಾಮಾಜಿಕ ಸಂಪರ್ಕದ ಸೊತ್ತು ಏಕವ್ಯಕ್ತಿಯಿಂದ ನಿರ್ಮಿಸಲು ಸಾದ್ಯವಿಲ್ಲ.

ಭಾಷಾ ಸಂಪರ್ಕದ ಹಿನ್ನೆಲೆಯಲ್ಲಿ ನೋಡುವದಾದರೆ ತಮಿಳು ಮತ್ತು ಕನ್ನಡ ಭಾಷೆಗೆ ಒಂದು ಅನುನ್ಯವಾದ ಬಾಂಧವ್ಯವಿದೆ. ಲಿಪಿದೃಷ್ಟಿಯಿಂದ ಬಹಳ ಹತ್ತಿರವಾದ ಭಾಷೆವೆಂದು ಹೇಳಬಹವುದು ಆದರೆ ಸಂಸ್ಕೃತಭೂಯಿಷ್ಟವಾದ ಭಾಷೆವೆಂದು ಕನ್ನಡಕ್ಕೆ ಕರೆಯುವರು. ಸಂಸ್ಕೃತದಷ್ಟು ಕನ್ನಡ ಕಾವ್ಯಕೃತಿಗಳಲ್ಲಿ ಬಳಕೆವಾಗಿಲ್ಲ. ನಮ್ಮ ಕವಿಗಳು ಸಂಸ್ಕೃತವನ್ನೆ ಹೆಚ್ಚಿನ ಪ್ರಮಾಣದಲ್ಲಿ ಬಳಕೆಮಾಡಿರುವುದನ್ನು ಕಾಣುತ್ತೆವೆ. ಸಂಸ್ಕೃತ, ತಮಿಳು, ಕನ್ನಡ ಭಾಷೆಗಳು ಬಹಳ ಪ್ರಾಚೀನವಾದವೆಂದು ಹೇಳಲು ಹೆಮ್ಮೆಯನಿಸುತ್ತದೆ ಸಂಸ್ಕೃತ, ತಮಿಳು ಭಾಷೆಗಳಿಂದಲೂ ಕನ್ನಡ ಪ್ರಾಚೀನ ಭಾಷೆ ಇರಬಹುದು ಆದರೆ ಆಧಾರಗಳು ಇಲ್ಲ.

**ಕನ್ನಡ ಭಾಷೆಯ ಪ್ರಾಚೀನತೆ :** ಕನ್ನಡ ಭಾಷೆಯ ಪ್ರಾಚೀನತೆಯನ್ನು ಗುರುತಿಸುವಾಗ ದೊರಕುವ ಆಧಾರಗಳನ್ನೇ ಪ್ರಮುಖ ಆಧಾರಗಳೆಂದು ಪರಿಗಣಿಸಬೇಕಾಗುತ್ತದೆ. ಇಂದು ಕನ್ನಡ ಹಾಗೂ ಕರ್ನಾಟಕ ಪದಗಳನ್ನು ಸೂಚಿಸುತ್ತವೆ. ಈ ಪದಗಳನ್ನು ನಿರ್ದಿಷ್ಟ ಅರ್ಥಗಳಲ್ಲಿ ಬಳಸುತ್ತಿದೇವೆ. ಈ ಪದಗಳ ಹಿಂದೆ ಭಾಷೆ, ಜನಾಂಗ ಜನಪದ, ಪ್ರದೇಶಗಳನ್ನು ಸೂಚಿಸುತ್ತವೆ. 'ಕವಿರಾಜಮಾರ್ಗ' ಎಂಬ ಕೃತಿಯಲ್ಲಿ ಪದಪ್ರಯೋಗವನ್ನು ನೋಡುತ್ತೇವೆ. ಉದಾಹರಣೆಗೆ "ಕಾವೇರಿಯಿಂದ ಗೋದಾವರಿವರಮಿರ್ದನಾಡದಾ ಕನ್ನಡದೊಳ್ ಭಾವಿಸಿದ ಜನಪದಂ" ಕಾವೇರಿಯಿಂದ ಗೋದಾವರಿ ಮಧ್ಯಬರುವ ಅಚ್ಚಗನ್ನಡ ನಾಡುಗಳಾದ 'ಕಿಸುವೊಳಲ್ ಮಹಾಕೊಪಣ ಪುಲಿಗೆರೆ' ಒಕ್ಕುಂದ ನಡುವಣ ನಾಡೆ ಕನ್ನಡ ತಿರುಳ್' ಎಂದು ಹೆಮ್ಮೆಯಿಂದ ಗಡಿಯನ್ನು ಗುರುತಿಸಿದ್ದಾನೆ. ಕ್ರಿ.ಶ 3 ನೆಯ ಶತಮಾನದ ತಮಿಳು ಕಾವ್ಯ 'ಶಿಲಪ್ಪದಿಗಾರಮ್' ನಲ್ಲಿ ಕನ್ನಡಿಗರನ್ನು 'ಕರುನಾಡರ್' ಎಂದು ಸಂಬೋಧಿಸಲಾಗಿದೆ. 'ಮಿಲಲ' ಎಂಬ ಚೋಳರಾಜನು ಮೈಸೂರು ಸೈನ್ಯದ ಸಹಾಯದಿಂದ ಸಿಂಹಳದ ದ್ವೀಪವನ್ನು ಜಯಸಿದನೆಂದು ಉಲ್ಲೇಖವಿದೆ. ಕ್ರಿ.ಶ 3 ನೆಯ ಶತಮಾನದಲ್ಲಿ 'ಸೆಂಗುಟ್ಟನ್' ಎಂಬ ಚೇರರಾಜನು ಉತ್ತರಕ್ಕೆ ಹೋಗುವಾಗ ನೀಲಗಿರಿಯಲ್ಲಿ ತಂಗೀ, ಅಲ್ಲಿಯ 'ಕನ್ನಡಿಗರು' ಪ್ರದರ್ಶಿಸಿದ ಕುಣಿತವನ್ನು ನೋಡಿ ಸಂತೋಷಪಟ್ಟಂತೆ 'ಶಿಲಪ್ಪದಿಗಾರಮ್' ಗ್ರಂಥದಲ್ಲಿ ಉಲ್ಲೇಖವಿದೆ.

ಕ್ರಿ. ಪೂ ಮೂರರಲ್ಲಿ ಆಗಿಹೋದ ಅಶೋಕ ಚಕ್ರವರ್ತಿಯ ಅನೇಕ ಸಂದೇಶವಾಹಕರು ಕರ್ನಾಟಕದ ಸುಪ್ರಸಿದ್ಧ ಸ್ಥಳಗಳಾದ ಕೊಪ್ಪಳ, ಮಸ್ಕಿ ಮತ್ತು ಬ್ರಹ್ಮಗಿರಿಗಳಲ್ಲಿ ತಮ್ಮ ಸಂದೇಶ ಪ್ರಸಾರವನ್ನು ಮಾಡಿದ್ದರ ದ್ಯೋತಕವಾಗಿ ಇಂದಿಗೂ ನಾವು ಶಿಲಾಶಾಸನಗಳನ್ನು ಕಾಣುತ್ತೇವೆ. ಬ್ರಹ್ಮಗಿರಿ ಶಿಲಾಶಾಸನದಲ್ಲಿ 'ಇಸಿಲ' ಎಂಬ ಕನ್ನಡ ಪದ ದೊರಕಿದೆ. ಕ್ರಿ.ಪೂ ನಾಲ್ಕನೆಯ ಶತಮಾನದಲ್ಲಿ ರಚಿತವಾದ ಮಹಾಭಾರತ 'ಸಭಾ ಪರ್ವ' ಮತ್ತು ಭೀಷ್ಮಪರ್ವಗಳಲ್ಲಿ ಕರ್ಣಾಟಾ ಮತ್ತು ಕರ್ನಾಟಕ ಶಬ್ದಗಳ ಉಲ್ಲೇಖವಿದೆ. ಉದಾಹರಣೆ

> ಅಥಾಪರೇ ಜನಪದಾ: ದಕ್ಷಿಣಾ: ಭರತವರ್ಷಭ
> ದ್ರವಿಡಾ: ಕೇರಲಾ: ಪ್ರಾಚ್ಯಾ: ಮೂಷಿಕಾ: ವನವಾಸಿಕಾ:
> ಕರ್ನಾಟಕ: ಮಾಹಿಷಕಾ: ವಿಕಲ್ಪಾ ಮೂಷಕಸ್ತಥಾ[1]

ಈ ಮೇಲಿನ ಪದ್ಯದಲ್ಲಿ ಹಲವಾರು ರಾಜ್ಯಗಳಲ್ಲಿ ಕರ್ನಾಟಕ ರಾಜ್ಯದ ಹೆಸರು ಉಲ್ಲೇಖ ವಿರುವುದು ಕನ್ನಡ ಭಾಷೆಗೆ ಹಿಡಿದ ಕೈಗನ್ನಡಿ ವೆಂದು ಹೇಳಬಹುದು. ಕ್ರಿ. ಪೂ ಮೂರನೆಯ ಶತಮಾನದ ಟಾಲಾಮಿ ಪ್ರಾಚೀನ ಭಾರತದ ಹಲವು ಸ್ಥಳಗಳನ್ನು ಹೆಸರಿಸಿದ್ದು ಅವು ಅಚ್ಚ ಕನ್ನಡದ ಸ್ಥಳಗಳೇ ಉದಾ: ಅಥಣಿ ತಾಲೂಕಿನ 'ತವಸಿ' ವಿಜಯಪರ ಜಿಲ್ಲೆ 'ಇಂಡಿ' ಹೂವಿನ ಹಿಪ್ಪರಿಗೆ, ರಾಯಚೂರ ಜಿಲ್ಲೆಯ 'ಮುದಗ್ಗಲ್' ಬೆಳಗಾವಿ ಜೀಲ್ಲೆಯ ಸವದತ್ತಿ, ಮಲೆನಾಡಿನ ಬನವಾಸಿ ಇವು ಪ್ರದೇಶಗಳನ್ನು ತನ್ನ ಗ್ರಂಥದಲ್ಲಿ ಗುರುತಿಸಿದ್ದಾನೆ.

ಶಾಸನಗಳಲ್ಲಿ ಕನ್ನಡ ಭಾಷೆ: ಕ್ರಿ. ಪೂ 1ನೆಯ ಶತಮಾನದ ಮಾಧವಪುರ ಶಾಸನದಲ್ಲಿ 'ನಾಟಪತಿ' ಶಬ್ದವಿದ್ದು ಇದು 'ನಾಟ–ನಾಡು' ಎಂಬುವದರ ಪ್ರಾಚೀನರೂಪ ಎಂದು ತೋರುತ್ತದೆ. ಹೀಗೆ ಕ್ರಿ.ಪೂ 3 ರಿಂದ 4ನೆಯ ಶತಮಾನದವರೆಗಿನ ಶಾಸನಗಳಲ್ಲಿ ಬರುವ ಅಪ್ಪಟ ಕನ್ನಡ ಪದಗಳನ್ನು ನೋಡಬಹುದು. ಉದಾ: ಕೊಟ್ಟ, ಅಪ್ಪಿಟ, ವೆಟ್ಟಕ್ಕಿ, ವೇಗೂರಂ, ಕುಂದ, ಮುಚ್ಚಂಡಿ, ಶಬ್ದಗಳಿದ್ದು ಇವು ಕನ್ನಡ ದ್ರಾವಿಡ ಬಾಷೆಯಿಂದ ಕವಲೊಡಿದು ಪ್ರತ್ಯೇಕ ಅಸ್ತಿತ್ವ ಪಡೆದದ್ದನ್ನು ಸೂಚಿಸುತ್ತವೆ.

**ಹಲ್ಮಿಡಿ ಶಾಸನ :** ಕನ್ನಡ ಭಾಷೆಗೆ ಘಟ್ಟಿತನ ದೊರಕಿಸಿಕೊಟ್ಟ ಶಾಸನ ವೆಂದರೆ ಹಲ್ಮಿಡಿ ಶಾಸನ ಇದು ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ವಾಯುವ್ಯಕ್ಕೆ 5 ಮೈಲು ದೂರವಿರುವ ಹಲ್ಮಿಡಿ ಗ್ರಾಮದ ವೀರಭದ್ರಸ್ವಾಮಿ ದೇವಾಲಯದ ಹತ್ತಿರದ ಎಗಚಿ ನದಿಯ ದಂಡೆಯ ಮೇಲಿರುವ ಬಂಡೆಗಲ್ಲಿನ ಮೇಲೆ ಕೆತ್ತಲಾಗಿದೆ. ಈ ಶಾಸನವು ದಾನ ಪ್ರಧಾನವಾದ ಶಾಸನ, ಗದ್ಯರೂಪದ ಶಾಸನ. ಈಶಾಸನದಲ್ಲಿ ಸುಮಾರು 20 ಕ್ಕೂ ಹೆಚ್ಚು ಕನ್ನಡ ಅಕ್ಷರಗಳು ದೊರೆಯುತ್ತವೆ. ಕನ್ನಡಿಗರ ಶೌರ್ಯ, ಸಾಹಸವನ್ನು ದಾನಗುಣವನ್ನು ವರ್ಣಿಸುವ ಶಾಸನ.

**ಕಪ್ಪೆ ಅರಭಟ್ಟನ ಶಾಸನ :** ಕನ್ನಡ ಭಾಷೆಗೆ ಮತ್ತಷ್ಟು ಘಟ್ಟಿತನ ದೊರಕಿಸಿ ಕೊಟ್ಟ ಶಾಸನ ವೆಂದರೆ ಕಪ್ಪೆ ಅರಭಟ್ಟನ ಶಾಸನ. ಕನ್ನಡ ಪದ್ಯ ಸಾಹಿತ್ಯ ಮತ್ತು ದೇಶಿ ಛಂದಸ್ಸಿನ ದೃಷ್ಠಿಯಿಂದ ಈ ಶಾಸನವು ಅತ್ಯಂತ ಮಹತ್ವದ ಸ್ಥಾನ ಪಡೆದುಕೊಂಡಿದೆ. ಕ್ರಿ.ಶ. 7ನೆಯ ಶತಮಾನದ ಸಾಮಾಜೀಕ, ಸಾಹಿತಿಕ, ಸಾಂಸ್ಕೃತಿಕ ಮೌಲ್ಯಗಳನ್ನು ತನ್ನ ಒಡಲಲ್ಲಿ ಗರ್ಭೀಕರಿಸಿಕೊಂಡಿದೆ. ಕನ್ನಡ ಛಂದಸ್ಸಿನ ತಾಯಿಬೇರಾದ ತ್ರಿಪದಿಯು ಮೊಟ್ಟಮೊದಲು ದೊರೆತದ್ದು ಈ ಶಾಸನದಲ್ಲಿ.

> ಸಾಧುಗೆ ಶಾದು ಮಾಧುರ್ಯಂಗೆ ಮಾಧುರ್ಯ್ಯಂ
> ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್
> ಮಾಧವನೀತನ್ ಪೆರನಲ್ಲ

ಹೀಗೆ ಒಬ್ಬ ಕನ್ನಡ ವೀರನ ಆವೇಶಯುತವಾದ ಸ್ವಭಾವ ಚಿತ್ರಣ ಈ ಶಾಸನದಲ್ಲಿ ಅಡೆಗಿಕೊಂಡಿದೆ. ಒಳ್ಳೆಯವರಿಗೆ ಒಳ್ಳೆಯವನು, ವೈರಿಗಳಿಗೆ ಕಡು ವೈರಿ ಇತನು. ಬಿಚ್ಚಿ ಬಿಟ್ಟ ಸಿಂಹವನ್ನು ಕಂಡವರಂತೆ ತಮಗಿನ್ನು ಉಳಿಗಾಲವಿಲ್ಲವೆಂದು ಭೀತಿಗೊಂಡು ಪಲಾಯನಗೈಯುತ್ತಿದ್ದರು ವೈರಿಗಳು. ಹೀಗೆ ಕನ್ನಡ ಭಾಷೆಗೆ ಮೂಖಸಾಕ್ಷಿಯಾಗಿ ಈ ಶಾಸನದ ತ್ರಿಪದಿ ನಿಲ್ಲುತ್ತದೆ.
ಕನ್ನಡ ಭಾಷೆಯ ವೈಶಿಷ್ಟ್ಯಗಳು: ಕನ್ನಡ ಅತ್ಯಂತ ಪ್ರಾಚೀನ ಭಾಷೆ. ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಕನ್ನಡ, ಮೂಲ ದ್ರಾವಿಡ ರೂಪದಿಂದ ಹಲವಾರು ವ್ಯತ್ಯಾಸ ಕಂಡಿದೆ. ಎರಡುವರೆ ಸಾವಿರ ವರ್ಷಗಳ ಸಾಹಿತ್ಯ ಹಾಗೂ ಆಡು ಭಾಷೆಯ ಚರಿತ್ರೆಯಲ್ಲಿ ಹಲವಾರು ಬದಲಾವಣೆ ಪಡೆದುಕೊಂಡಿದೆ.
ಆಡುನುಡಿ ಲಿಖಿತ ಭಾಷೆ: ಎರಡುವರೆ ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಆಡುನುಡಿಯಲ್ಲಿ ಉಂಟಾಗಿರುವ ಗಮನಾರ್ಹ ಬದಲಾವಣೆಯನ್ನು ಗುರುತಿಸಿದರೆ ಮೌಖಿಕ ಜನಪದ ಸಾಹಿತ್ಯ ಲಿಖಿತ ರೂಪಪಡೆದುಕೊಂಡದ್ದು.

**ಲಿಖಿತ ಭಾಷೆಯ ವಿವಿಧ ಘಟ್ಟಗಳು:** ಕನ್ನಡ ಭಾಷೆಯಲ್ಲಿ ಚಾರಿತ್ರಿಕವಾಗಿ ನಾಲ್ಕು ಘಟ್ಟಗಳನ್ನು ಗುರುತಿಸಲಾಗುತ್ತದೆ. ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಆಧುನಿಕಗನ್ನಡ ಹೀಗೆ ಆಯಾ ಕಾಲದ ಸಾಹಿತ್ಯದ ಆಧಾರದ ಮೇಲೆ ಗುರುತಿಸಲಾಗಿದೆ.

**ಕನ್ನಡ ಲಿಖಿತ ಭಾಷೆಯ ಆಧಾರ ಗ್ರಂಥಗಳು:** ಲಿಖಿತ ಭಾಷೆಯ ಚಾರಿತ್ರಿಕ ಸ್ವರೂಪ ತಿಳಿಯಲು ಕನ್ನಡ ಕವಿಗಳು ರಚಿಸಿದ ಗ್ರಂಥಗಳನ್ನು ನೋಡಬಹುದು. ಅಮೋಘವರ್ಷ ನೃಪತುಂಗನ 'ಕವಿರಾಜಮಾರ್ಗ' ಶಿವಕೋಟಿಚಾರ್ಯನ 'ವಡ್ಡಾರಾಧನೆ' ಹಾಗೇ ಪಂಪ, ರನ್ನ. ಜನ್ನ, ನಾಗವರ್ಮ, ಕೇಶಿರಾಜ, ಭಟ್ಟಾಕಳಂಕ ಮುಂತಾದವರ ಕೃತಿಗಳು ಆಧಾರಗಳಾಗಿವೆ. ಆಧುನಿಕ ಕವಿಗಳಾದ ಬಿ.ಎಂ.ಶ್ರೀ., ಕುವೆಂಪು, ಬೇಂದ್ರೆ, ಜಿ.ಪಿ.ರಾಜರತ್ನಂ ಮುಂತಾದವರ ಗ್ರಂಥಗಳು ಬಹುದೊಡ್ಡ ಆಧಾರವಾಗಿ ನಿಲ್ಲುತ್ತವೆ

**ಉಪಸಂಹಾರ:** ಕನ್ನಡ ಭಾಷೆಯ ಹುಟ್ಟು, ಪ್ರಪಂಚದ ಹುಟ್ಟು. ಕನ್ನಡ ಭಾಷೆಯ ಸಾವು ಪ್ರಪಂಚದ ಸಾವು. ಕನ್ನಡದ ಮೇಧಾವಿ ಕವಿ ಜಿ. ಪಿ. ರಾಜರತ್ನಂ ಇವರ ಕನ್ನಡದ ಪ್ರೀತಿ ಉತ್ಕಟವಾದದು. "ಹೆಂಡತಿ ಬಿಡು ಅಂದರೆ ಕಣ್ಣ್ ಮುಚ್ಚಿ ಬಿಡತಿನಿ, ಹೆಂಡ ಬಿಡು ಅಂದರೆ ಸ್ವಲ್ಪ ವಿಚಾರ ಮಾಡತಿನಿ, ಕನ್ನಡ ಮಾತಾಡುವದನ್ನು ಬಿಟ್ಟಬಿಡು ಅಂದರೆ ಆ ದೇವರ ಕತ್ತನ್ನು ಕುಯಿದು ಹಾಕತಿನಿ" ಎಂಬ ಮಾತು ಕನ್ನಡ ಪ್ರೀತಿಗೆ ಕೈಗನ್ನಡಿಯಾಗಿದೆ. ಅಷ್ಟೆ ಅಲ್ಲದೆ ಕನ್ನಡ ಪದಗಳು ಈ ಪ್ರಪಂಚ ವಿರುವರೆಗೂ ಮುನ್ನುಗ್ಗಬೇಕು. ಕನ್ನಡ ಬಾಷೆಗೆ ಸಾವು ಎಂಬ ಪರಿಕಲ್ಪನೆಯು ಅದರ ಸುತ್ತ ಸುಳಿಯಬಾರದು. ಹೀಗೆ ಜನಪದದ ಸೊಗಡು ಹೊಂದಿಕೊಂಡು ಎರಡುವರೆಸಾವಿರ ವರ್ಷದ ಇತಿಹಾಸವನ್ನು ಗರ್ಭೀಕರಿಸಿಕೊಂಡ ಭಾಷೆಯೇ ಕನ್ನಡ ಭಾಷೆ.

**ಅಡಿ ಟಿಪ್ಪಣಿ**

1) ಕನ್ನಡ ಭಾಷಾ ಶಾಸ್ತ್ರ – ರಾ. ಯ. ಧಾರವಾಡಕರ ಪುಟ. ಸಂಖ್ಯೆ–107

**ಆಧಾರ ಗ್ರಂಥಗಳು**

1. ಕನ್ನಡ ಭಾಷಾಶಾಸ್ತ್ರ ––––––– ರಾ. ಯ ಧಾರವಾಡಕರ
2. ಕರ್ನಾಟ ಭಾಷಾ ಲಿಪಿ–––––– ನಂಜುಂಡಶಾಸ್ತ್ರಿಟಿ
3. ದ್ರಾವಿಡ ಭಾಷಾ ವಿಜ್ಞಾನ––––– ಹಂಪಾ ನಾಗರಾಯ್ಯ
4. ದ್ರಾವಿಡ ಭಾಷಾ ವ್ಯಾಸಂಗ––––– ಸಂಗಮೇಶ ಸವದತ್ತಿಮಠ
5. ಕನ್ನಡ ಸಾಹಿತ್ಯ ಕೋಶ ––––––– ಡಾ ರಾಜಪ್ಪ ದಳವಾಯಿ